**ದಿನಾಂಕಃ 10-02-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 11 ನೇ ಪ್ರತಿವಾದಿ ಪರ ಶ್ರೀ H M S ವಕೀಲರಿಂದಃ-**

1) ಮಹಾದೇವಪ್ಪ ನನ್ನ ಗಂಡನಾಗಬೇಕು, ಈ ದಾವೆಯನ್ನು ನಮ್ಮ ಜಮೀನು ನಮಗೆ ಬರಬೇಕೆಂದು ಹಾಕಿರುತ್ತೇವೆ. ನಾನು ಶಾಲೆಯನ್ನು ಕಲಿತಿರುವುದಿಲ್ಲ ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ನನಗೆ ಗೊತ್ತಿರುವುದಿಲ್ಲ. ನನಗೆ 3 ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇರುತ್ತಾನೆ. ಮಗನ ಹೆಸರು ತೋಪೇಷ ಅಂತಾ ಇರುತ್ತದೆ. ಹೆಣ್ಣು ಮಕ್ಕಳು ಗೀತಾ, ಯಶೋಧಾ, ಪ್ರಮೀಳಾ ಇರುತ್ತಾರೆ. ಈ ದಾವೆಯಲ್ಲಿ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿದ್ದೇನೆ. ತೋಪೇಷನು 9 ನೇ ತರಗತಿ ವರೆಗೆ ಓದಿರುತ್ತಾನೆ. ಬಳೂರು ಗ್ರಾಮದಲ್ಲಿ 4 ಎಕರೆ ಜಮೀನು ಇರುತ್ತದೆ ಅದರ ಸರ್ವೆ ನಂ 43/9 ಇರುತ್ತದೆ. ಚೋಡನಾಯಕನ ಕೊಪ್ಪದ ಗ್ರಾಮದಲ್ಲಿ 3 ಎಕರೆ ಜಮೀನವು ಅದರ ಸರ್ವೆ ನಂ 56/6 ಇರುತ್ತದೆ. ಇನ್ನೊಂದು ಚೋಡನಾಯಕನ ಕೊಪ್ಪದ ಗ್ರಾಮದಲ್ಲಿ ಸಹ 3 ಎಕರೆ ಜಮೀನವು ಅದರ ಸರ್ವೆ ನಂ 53/6 ಇರುತ್ತದೆ.

2) ಚೋಡನಾಯಕನಕೊಪ್ಪದಲ್ಲಿರುವ 3 ಎಕರೆ ಜಮೀನು ಬಸಪ್ಪನ ಹೆಸರಿನಲ್ಲಿ ಹಾಗೂ ಇನ್ನೊಂದು 3 ಎಕರೆ ಜಮೀನವು ಹನುಮಪ್ಪನ ಹೆಸರಿನಲ್ಲಿ ದರಖಾಸ್ತನಲ್ಲಿ ಬಂದಿರುತ್ತದೆ. ಹನುಮಪ್ಪ ಅಂದರೆ 10 ನೇ ಪ್ರತಿವಾದಿ/ ರುದ್ರಮ್ಮನ ಗಂಡ ಹಾಗೂ 11 ನೇ ಪ್ರತಿವಾದಿಯ ತಂದೆ ಅಂದರೆ ಸರಿ. ಯಾವ ದಿನಾಂಕದಂದು ಹನುಮಂತಪ್ಪ ತೀರಿಕೊಂಡಿದ್ದಾರೆ ಅಂದರೆ ಗೊತ್ತಿಲ್ಲ ಆದರೆ ಸಾಕ್ಷಿಯು ನನ್ನ ಗಂಡ ತೀರಿಕೊಳ್ಳುವ 4-5 ವರ್ಷಗಳ ಮುಂಚೆ ತೀರಿಕೊಂಡಿರುತ್ತಾರೆ. ಬಸಪ್ಪನಿಗೆ ಮತ್ತು ಹನುಮಂತಪ್ಪನಿಗೆ ಮೂರು ಮೂರು ಎಕರೆಯಂತೆ ಜಮೀನವು ದರಖಾಸ್ತನಲ್ಲಿ ಮಂಜೂರಾಗಿತ್ತು ಅಂದರೆ ಸಾಕ್ಷಿಯು ನಮ್ಮ ಮಾವ ಮಾಡಿಸಿದ್ದು ಎಂದು ಹೇಳುತ್ತಾರೆ. ನಮ್ಮ ಮಾವ ಅಂದರೆ ಗಿರಿಯಪ್ಪ / 9 ನೇ ಪ್ರತಿವಾದಿ ಇರುತ್ತಾರೆ. ಗಿರಿಯಪ್ಪನ ತಂದೆ

ಹೆಸರು ಹನುಮಂತಪ್ಪ ಇರುತ್ತದೆ. ಹನುಮಂತಪ್ಪನಿಗೆ ಒಟ್ಟು 6 ಜನ ಮಕ್ಕಳು ಅವರಲ್ಲಿ 5 ಜನ ಗಂಡು ಮಕ್ಕಳು ಹಾಗಾ ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ಅವರು ಯಾರು ಅಂದರೆ ತಿಮ್ಮಪ್ಪ , ಬಸಪ್ಪ, ಗಿರಿಯಪ್ಪ, ಹನುಮಂತಪ್ಪ , ನನ್ನ ಗಂಡ ಮಹಾದೇವಪ್ಪ ಇರುತ್ತಾರೆ. ಹೆಣ್ಣು ಮಗಳು ಸಿದ್ದಮ್ಮ ಅಂತಾ ಇದ್ದಳು, ಅವಳು ತೀರಿಕೊಂಡಿರುತ್ತಾಳೆ. ಸಿದ್ಧಮ್ಮನಿಗೆ 3 ಜನ ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ಅವರಲ್ಲಿ ಬಸವರಾಜಪ್ಪ , ವಸಂತ ಹಾಗೂ ಸಿದ್ಲಿಂಗಮ್ಮ ಜೀವಂತ ಇರುತ್ತಾರೆ. ಬಸವರಾಜಪ್ಪ ಶಿವಮೊಗ್ಗದಲ್ಲಿ ಹಾಗೂ ವಸಂತ ಕಾಗಿನಲಿಯಲ್ಲಿ ವಾಸ ಇದ್ದಾರೆ. ಸದರಿ ಬಸವರಾಜಪ್ಪ , ವಸಂತ ಹಾಗೂ ಸಿದ್ಲಿಂಗಮ್ಮ ಅವರನ್ನು ಪಾರ್ಟಿ ಮಾಡಿರುವುದಿಲ್ಲ. ಅವರನ್ನ ಪಕ್ಷಗಾರರನ್ನಾಗಿ ಮಾಡಲು ತೊಂದರೆ ಇರುವುದಿಲ್ಲ. ನನ್ನ ಗಂಡನ ತಂದೆಗೆ ಎಷ್ಟು ಜನ ಅಣ್ಣ ತಮ್ಮಂದಿರು ಅಂತಾ ಗೊತ್ತಿಲ್ಲ. ನನ್ನ ಮಾವ ಹನುಮಂತಪ್ಪನಿಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ ಜಮೀನುಗಳು ಇರುತ್ತವೆ. ಸದರಿ ಜಮೀನುಗಳನ್ನು ಈ ದಾವೆಯಲ್ಲಿ ತೋರಿಸಿರುವುದಿಲ್ಲ.

3) ನಮ್ಮ ಕುಟುಂಬಕ್ಕೆ ಒಟ್ಟು ಈ ದಾವಾ ಆಸ್ತಿ ಹೊರತುಪಡಿಸಿ 14 ಜಮೀನುಗಳು ಇರುತ್ತವೆ ಅಂದರೆ ಕಾಗಿನೆಲಿ ಹಾಗೂ ಚೋಡನಾಯಕನಕೊಪ್ಪದಲ್ಲಿ ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ ಜಮೀನುಗಳು ಇವೆ ಅಂದರೆ ಇವೆ ಎಂದು ಹೇಳುತ್ತಾರೆ. ಯಾವ ಸರ್ವೆ ನಂಬರ್ ಗಳು ಹಾಗೂ ಎಷ್ಟು ಎಷ್ಟು ವಿಸ್ತೀರ್ಣಗಳು ಇವೆ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಮತ್ತು ಆತನ ಅಣ್ಣ ತಮ್ಮಂದಿರು ಒಟ್ಟಿಗೆ ಇರುವುದಿಲ್ಲ. ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಅಂದರೆ ಸರಿ. ಸಾಕ್ಷಿಯು ಜಮೀನು ಹಂಚಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ. ಎಷ್ಟು ವರ್ಷಗಳಿಂದ ಬೇರೆ ಬೇರೆಯಾಗಿ ವಾಸ ಮಾಡುತ್ತಿದ್ದೀರಾ ಅಂದರೆ 20 -30 ವರ್ಷಗಳ ಹಿಂದಿನಿಂದ ಬೇರೆ ಬೇರೆ ವಾಸವಿದ್ದೇವೆ ಎಂದು ಹೇಳುತ್ತಾರೆ. ನಮ್ಮ ಅಪ್ಪನ ತಂಗಿಯ ಮನೆಯಲ್ಲಿ ಬೇರೆಯಾಗಿ ವಾಸ ಮಾಡುತ್ತಿದ್ದೇವೆ. ಉಳಿದವರು ನನ್ನ ಗಂಡನ ಅಣ್ಣ ತಮ್ಮಂದಿರು ನನ್ನ ಮದುವೆ ಆಗುವ ಮುಂಚೆಯೇ ಬೇರೆ ಬೇರೆ ಆಗಿದ್ದರು.

4) ನನ್ನ ಗಂಡನ ಅಣ್ಣ 9 ನೇ ಪ್ರತಿವಾದಿ ಶಾಲೆಯಲ್ಲಿ ಶಿಕ್ಷಕರಾಗಿದ್ದರು ಅಂದರೆ ಸರಿ. ನಮ್ಮ ಕುಟುಂಬದಲ್ಲಿ 9 ನೇ ಪ್ರತಿವಾದಿಗೆ ಮಾತ್ರ ಓದು ಬರಹ ಗೊತ್ತು ಅಂದರೆ ಸರಿ. ಮನೆತನದ ಆಸ್ತಿಗಳ ಬಗ್ಗೆ ಏನು ಬರವಣಿಗೆ ಆಗಿದೆ ಎಂಬುದು ಗೊತ್ತಿಲ್ಲ. ನಮ್ಮ ಮನೆತನದ ಆಸ್ತಿಗಳ ಬಗ್ಗೆ ವ್ಯವಹಾರ ಆದ ಬಗ್ಗೆ ನನ್ನ ಗಂಡನಿಗೆ ಗೊತ್ತು. ಕಾಗಿನಲೆ ಗ್ರಾಮದಲ್ಲಿ 1 ಎಕರೆ ಜಮೀನನ್ನು ನಾವು ಮಾಡುತ್ತಿದ್ದೇವೆ. ಅದರ ಸರ್ವೆ ನಂಬರ್ ಗೊತ್ತಿಲ್ಲ. ಸದರಿ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ನಮೂದು ಮಾಡಿದ ಬಗ್ಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಹನುಮಂತಪ್ಪ , ತಿಮ್ಮಪ್ಪ ಮತ್ತು ಬಸಪ್ಪನ ಸ್ವಂತ ಆಸ್ತಿಗಳು ಅಂದರೆ ಸರಿಯಲ್ಲ. ಅವರೆಲ್ಲರೂ ಬೇರೆ ಬೇರೆಯಾಗಿ ವಾಸವಿದ್ದಾಗ ಸದರಿ ಆಸ್ತಿಗಳು ಮಂಜೂರಾಗಿವೆ ಅಂದರೆ ಸರಿಯಲ್ಲ. ಒಟ್ಟಿಗೆ ಇದ್ದಾಗ ಮಂಜೂರಾಗಿವೆ ಎಂದು ಸಾಕ್ಷಿ ಹೇಳುತ್ತಿದ್ದಾರೆ. 9 ನೇ ಪ್ರತಿವಾದಿಯು ಹೇಳಿದ್ದರಿಂದ ನಾನು ಈ ಸದರಿ ವಿಷಯ ಹೇಳುತ್ತಿದ್ದೇನೆ ಅಂದರೆ ಸಾಕ್ಷಿಯು ನನ್ನ ಗಂಡ ಸಹ ಹೇಳಿದ್ದಾನೆ ಎಂದು ಹೇಳುತ್ತಾರೆ.

5) ನನ್ನ ಗಂಡ ಮತ್ತು ಅಣ್ಣ ತಮ್ಮಂದಿರು ಬಹಳ ಹಿಂದೆಯೇ ಕುಟುಂಬದ ಆಸ್ತಿಯನ್ನು ಭಾಗ ಮಾಡಿಕೊಂಡು ವಾಸವಿದ್ದರು ಅಂದರೆ ಸರಿಯಲ್ಲ. 9 ನೇ ಪ್ರತಿವಾದಿಯು ನನ್ನ ಗಂಡನಿಗೆ ಹಿಸ್ಸೆಬೇಕಾದರೆ ದಾವೆ ಹಾಕಿಕೊಂಡು ತೆಗೆದುಕೊ ಅಂತಾ ಹೇಳಿದ್ದರಿಂದ ನನ್ನ ಗಂಡ ಹಾಕಿದ್ದಾನೆ ಅಂದರೆ ಸರಿ. ಈ ದಾವೆಯಲ್ಲಿ ಕಾಗಿನಲೆ ಮತ್ತು ಚೋಡನಕೊಪ್ಪ ಗ್ರಾಮಗಳಲ್ಲಿರುವ ಆಸ್ತಿಗಳನ್ನು ಸೇರಿಸಿಲ್ಲ ಅಂದರೆ ಗೊತ್ತಿಲ್ಲ. ನಾವು ಮತ್ತು 9 ನೇ ಪ್ರತಿವಾದಿ ಶಾಮಿಲಾಗಿ 10 ಮತ್ತು 11 ನೇ ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ದಾವೆ ಹಾಕಿದ್ದೇವೆ ಅಂದರೆ ಸರಿಯಲ್ಲ. ದಾವೆ ಆಸ್ತಿಯಲ್ಲಿ ನನಗಾಗಲೀ 9 ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

c/c 2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು**

**ಈಗಾಗಲೇ ಸಾಕಷ್ಟು ಕಾಲವಕಾಶ ನೀಡಿದ್ದು , ಆದ್ದರಿಂದ ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರವಾದ ಕಾರಣ ಇಲ್ಲದೇ ಇದ್ದುದರಿಂದ ಪಾಟೀ ಸವಾಲು ಮುಕ್ತಾಯ ಎಂದು ತೆಗೆದುಕೊಳ್ಳಲಾಯಿತು.**